ವಿಷಯ : ಗುಬ್ಬಿ ಕ್ಷೇತ್ರದಲ್ಲಿರುವ ಕೊಳವೆ ಬಾವಿಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೪೦೨ (೭೧೭)

ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಹಾಗೂ ಪಶು ಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆ ಗುಬ್ಬಿ ಕ್ಷೇತ್ರದಲ್ಲಿ ಹಾಲಿ ಇರುವ ಕುಡಿಯುವ ನೀರಿನ ಕೊಳವೆ ಬಾವಿಗಳೆಷ್ಟು ?

ಅವುಗಳಲ್ಲಿ ಪೂರ್ಣ ಬತ್ತಿ ಹೋಗಿರುವ ಕೊಳವೆ ಬಾವಿಗಳೆಷ್ಟು ?

ರಿಪೇರಿ ಆಗಬೇಕಾಗಿರುವ ಕೊಳವೆ ಬಾವಿಗಳೆಷ್ಟು ?

ಆ) ಈ ಕ್ಷೇತ್ರದಲ್ಲಿ ಒಂದೂ ಕೂಡ ಕುಡಿಯುವ ನೀರಿನ ಕೊಳವೆ ಬಾವಿ ಇಲ್ಲದ ಅಸಲಿ ಮತ್ತು ಮಜರ್ ಗ್ರಾಮ, ತಾಂಡೆ, ಹರಿಜನ್ ಗ್ರಾಮಗಳ ಸಂಖ್ಯೆ ಎಷ್ಟು ಎಂಬುದರ ಪೂರ್ಣ ವಿವರ ನೀಡುವುದು.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಸಚಿವರು :

ಅ) ೬೯೦
೧೫
೧೪

ಆ) ಗ್ರಾಮಗಳು ಯಾವುವೂ ಇಲ್ಲ.
ತಾಂಡೆಗಳು ಮತ್ತು ಹರಿಜನ ಕೇರಿಗಳು : ೧೩ (ಹೊಸದಾಗಿ ನಿರ್ಮಿತವಾದುವು).

ವಿಷಯ : ತಾವರಕೆರೆ ಹೋಬಳಿಯಲ್ಲಿ ನೂರು ಬಾವಿಗಳ ಯೋಜನೆಯಡಿಯಲ್ಲಿ ಫಲಾನುಭವಿಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೪೦೪ (೭೫೬)

ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?